ಹಿಂದಿ ಮತ್ತು ಕನ್ನಡ ಭಾಷೆಯ ಮೇಲೆ ಹಿಡಿತ ಇರುವ ಹಿರಿಯ ಲೇಖಕಿ, ಅನುವಾದಕಿ ಸುಮಂಗಲಾ ಎಸ್. ಮುಮ್ಮಿಗಟ್ಟಿ ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಓದಿದವರು. ಅದೇ ವಿದ್ಯಾಸಂಸ್ಥೆಯ ಹಿಂದಿ ಸ್ನಾತಕೋತ್ತರ ವಿಭಾಗದಲ್ಲಿ ಪ್ರಾಧ್ಯಾಪಕಿಯಾಗಿ, ವಿಭಾಗದ ಮುಖ್ಯಸ್ಥೆಯಾಗಿ ಕಾರ್ಯ ನಿರ್ವಹಿಸಿ ಈಗ ನಿವೃತ್ತರು. ಸಂಶೋಧನೆ ಮತ್ತು ಅನುವಾದ ಅವರ ಪ್ರೀತಿಯ ವಿಷಯಗಳು. 'ಭಗವತಿ ಪ್ರಸಾದ ವಾಜಪೇಯಿ ಕಾ ಗದ್ಯಸಾಹಿತ್ಯ', 'ಅನ್ವೇಷಣೆ', 'ಸಾಠೋತ್ತರಿ ಕನ್ನಡಹಿಂದಿ ಕವಯಿತ್ರಿಯಾಂ' ಇತ್ಯಾದಿ ಇವರ ಸಂಶೋಧನಾ ಗ್ರಂಥಗಳು. 'ಕಲ್ಯಾಣ ಕೀ ಅವನತಿ', 'ಸೂರ್ಯ ಕೀ ಛಾಯಾ', 'ಇಂದ್ರಧನುಷ' ಮುಂತಾದವು ಕನ್ನಡದಿಂದ ಹಿಂದಿಗೆ ಅನುವಾದಿಸಿದ ಕೃತಿಗಳು. 'ಕಥಾನವಮಿ' ಹಿಂದಿ ಕಥೆಗಳ ಕನ್ನಡ ಅನುವಾದ.

ಇಲ್ಲವೆನ್ನುವಂತೆ, ಅವನ ಕಾವಲು ಕಾಯುವುದನ್ನು ನೀನು ಮಾಡುತ್ತೀಯಾ. ನಿನ್ನ ಕಟ್ಟಿಗೆಯ ಹಲಗೆಗಳ ಮೇಲೆ ಅವನನ್ನು ಮಲಗಿಸುತ್ತೀಯಾ, ನೀನು ಕೆಸರಿನಲ್ಲಿ ಬಿದ್ದಿರುತ್ತಿ. ಹೀಗೆ ಮಾಡುತ್ತ ನೀನೆಲ್ಲಿಯಾದರೂ ಅನಾರೋಗ್ಯಕ್ಕೆ ತುತ್ತಾದೀಯಾ. ಚಳಿ ಹೇಗಿದೆ, ಮೃತ್ಯುವಾಗಿದೆ ಮತ್ತು 'ನಿಮೋನಿಯಾ'ದಿಂದ ಸಾಯುವವರಿಗೆ ಹೊಸಕಾಲುವೆಯ ಹತ್ತಿರದ ಚೌಕ ಜಮೀನು ಸಿಗುವುದಿಲ್ಲ.'

'ನನಗೆ ಹೆದರಿಕೆ ಇಲ್ಲ. ನಾನಂತೂ ಬುಲೆಲ ತಗ್ಗಿನ ದಡದಲ್ಲಿ ಸಾಯುವೆ. ಕೀರತಸಿಂಹ ಅಣ್ಣನ ಮಡಿಲಲ್ಲಿ ನನ್ನ ತಲೆ ಇರುವುದು ಮತ್ತು ನನ್ನ ಕೈಗಳಿಂದ ಅಂಗಳದಲ್ಲಿ ನೆಟ್ಟ ಮಾವಿನ ಮರಗಳ ನೆರಳಿರುವುದು.'

ವಜೀರಸಿಂಹ ಹುಬ್ಬೇರಿಸಿ ಹೇಳಿದ, 'ಅದೇನು ಸಾಯುವುದು ಸಾಯಿಸುವುದರ ಮಾತು ಶುರು ಮಾಡಿದ್ದೀಯಾ? ಸಾಯಲಿ ಜರ್ಮನಿಗಳು ಹಾಗೂ ತುರ್ಕರು.' 'ಅರೆ ಸಹೋದರರೆ, ಏನಾದರೂ ಹಾಡಿ.'

ದಾಡಿಯುಳ್ಳ ಮನೆತನಸ್ಥ ಸಿಖ್ಖ ಲಫಂಗರ ಇಂಥ ಗೀತೆ ಹಾಡುವನೆಂದು ಯಾರಿಗೆ ಗೊತ್ತಿತ್ತು, ಆದರೆ ಸಂಪೂರ್ಣ ಕಣಿವೆ ಗೀತೆಯಿಂದಾಗಿ ಅನುಕರಣಿಸಿತು ಹಾಗೂ ನಾಲ್ಕು ದಿನಗಳಿಂದ ಮಲಗಿದ್ದುಕೊಂಡು ಮೋಜು ಮಸ್ತಿ ಮಾಡುತ್ತಿರುವಂತೆ ಸೈನಿಕರು ಉಲ್ಲಸಿತರಾದರು.

### 3

ಎರಡು ಪ್ರಹರ ರಾತ್ರಿ ಕಳೆಯಿತು. ಕತ್ತಲಿದೆ. ನೀರವತೆ ಆವರಿಸಿದೆ. ಬೋಧಾಸಿಂಹ ಬಿಸ್ಕತ್ತುಗಳ ಖಾಲಿ ಟಿನ್ ಡಬ್ಬಿಗಳ ಮೇಲೆ ತನ್ನ ಎರಡೂ ಕಂಬಳಿಗಳನ್ನು ಹಾಸಿ ಮತ್ತು ಲಹನಾಸಿಂಹನ ಎರಡು ಕಂಬಳಿ ಮತ್ತು ಒಂದು ಬರಾನಕೋಟ ಹೊದ್ದುಕೊಂಡು ಮಲಗಿದ್ದಾನೆ. ಲಹನಾಸಿಂಹ ಕಾವಲು ಕಾಯುತ್ತಿದ್ದಾನೆ. ಒಂದು ಕಣ್ಣು ಕಣಿವೆಯ ಮೇಲಿದೆ ಇನ್ನೊಂದು, ಬೋಧಾಸಿಂಹನ ದುರ್ಬಲ ಶರೀರದ ಮೇಲೆ. ಬೋಧಾಸಿಂಹ ನರಳಿದನು.

'ಏನು ಬೋಧಾ ಅಣ್ಣಾ, ಏನಾಯಿತು?'

'ನೀರು ಕುಡಿಸು.' ಲಹನಾಸಿಂಹನು ಲೋಟವನ್ನು ಅವನ ಬಾಯಿಗೆ ತಗಲಿಸಿ ಕೇಳಿದ, 'ಹೇಳು ಹೇಗಿದ್ದೀಯಾ?' ನೀರು ಕುಡಿದು ಬೋಧಾಸಿಂಹ ಹೇಳಿದ, 'ನಡುಕ ಹುಟ್ಟುತ್ತಿದೆ ರೋಮ-ರೋಮಗಳಲ್ಲಿ, ಹಲ್ಲುಗಳ ಕಟಾಯಿಸುತ್ತಿವೆ.'

'ಸರಿ, ನನ್ನ ಜರ್ಸಿ ಧರಿಸಿಕೊಳ್ಳು.'

'ಮತ್ತೆ ನೀನು?'

'ನನ್ನ ಹತ್ತಿರ ಅಗ್ಗಿಷ್ಟಿಕೆ ಇದೆ, ನನಗೆ ಸೆಕೆಯಾಗುತ್ತಿದೆ. ಬೆವರು ಬರುತ್ತಿದೆ.'

'ಬೇಡ, ನಾನು ಧರಿಸಿಕೊಳ್ಳುವುದಿಲ್ಲ, ನಾಲ್ಕು ದಿನಗಳಿಂದ ನೀನು ನನಗಾಗಿ...'

'ಹಾ, ನೆನಪಾಯಿತು. ನನ್ನ ಹತ್ತಿರ ಇನ್ನೊಂದು ಜರ್ಸಿ ಇದೆ. ಇಂದು ಮುಂಜಾನೆಯೇ ಬಂದಿದೆ. ವಿಲಾಯತನಿಂದ ಮೇಮ ಹೆಣೆಹೆಣೆದು ಕಳಿಸುತ್ತಿರುತ್ತಾರೆ. ಗುರು ಅವರಿಗೆ ಒಳ್ಳೆಯದು ಮಾಡಲಿ.' ಹೀಗೆ ಹೇಳಿ ಲಹನಾ ತನ್ನ ಕೋಟನ್ನು ಬಿಚ್ಚಿ ಜರ್ಸಿ ತೆಗೆಯತೊಡಗಿದನು.

'ನಿಜ ಹೇಳುತ್ತಿರುವೆಯಾ?'

'ಇನ್ನೇನು ಸುಳ್ಳೆ?' ಹೀಗೆ ಹೇಳಿ ಬೇಡವೆನ್ನುತ್ತಿರುವ ಬೋಧಾನಿಗೆ ಅವನು ಬಲವಂತವಾಗಿ ಜರ್ಸಿ ತೊಡಿಸಿದ ಮತ್ತು ಖಾಕಿ ಕೋಟ ಹಾಗೂ ಜೀನನ ಕುರ್ತಾ ಮಾತ್ರ ಧರಿಸಿಕೊಂಡು ಕಾವಲಿಗೆ ನಿಂತುಕೊಂಡನು. ಮೇಮಳ ಜರ್ಸಿಯ ಕಥೆ ಕೇವಲ ಕಥೆಯಾಗಿತ್ತು.

ಅರ್ಧ ಘಂಟೆ ಕಳೆಯಿತು. ಅಷ್ಟರಲ್ಲಿ ಕಣಿವೆಯಿಂದ